# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s CMES Jupiter Private Limited ಕಂಪನಿಯವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 70 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 127 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 288 ಎನ್‌ಸಿಇ 2019, ದಿನಾಂಕ: 30.12.2019
2) ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರ ಪತ್ರ ಸಂಖ್ಯೆ: ಕೆ.ಆರ್.ಇ.ಡಿ.ಎಲ್/08/CMESJPL 70 to 127 MW/Jagaluru/F-1831/2021/2950, ದಿನಾಂಕ:16.10.2021.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ M/s CMES Jupiter Private Limited ಕಂಪನಿಯವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ತಮದಿಹಳ್ಳಿ, ಕಸವನಹಳ್ಳಿ, ಕೊರಸರಹಟ್ಟಿ, ಗೊಲ್ಲರಹಟ್ಟಿ, ಹನುಮಂತಪುರ, ಗೋಗುಡ್ಡು, ತಿಮ್ಮಲಾಪುರ್, ಸಿದ್ದಮ್ಮನಹಳ್ಳಿ, ಬಂಗಾರಕ್ಕನಗುಡ್ಡ, ಮೂಡಲಮಾಚೀಕೆರೆ, ಕಮಗೇತನಹಳ್ಳಿ, ಭರಮಸಮುದ್ರ, ಉದ್ದುಘಟ್ಟ ಮತ್ತು ಜಗಳೂರು ಗ್ರಾಮಗಳಲ್ಲಿ 70 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಕೆಲವೊಂದು ಷರತ್ತಿಗೊಳಪಟ್ಟು, ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s CMES Jupiter Private Limited ಕಂಪನಿಯವರಿಗೆ ಹಂಚಿಕೆಯಾಗಿರುವ 70 ಮೆ.ವ್ಯಾ. ಸಾಮರ್ಥ್ಯವನ್ನು 127 ಮೆ.ವ್ಯಾ.ಗೆ ಹೆಚ್ಚಿಸುವಂತೆ ಅಭಿವೃದ್ಧಿದಾರರು ಕೋರಿದ್ದು, ಈ ಸಂಬಂಧ ಅರ್ಜಿ ಮತ್ತು ಡಿಪಿಆರ್ ಶುಲ್ಕವನ್ನು ಪಾವತಿಸಿರುವುದಾಗಿ ಹಾಗೂ ಸದರಿ ಕಂಪನಿಯು M/s Clean Max Enviro Energy Solutions Private Limited ರವರಿಂದ ಸ್ಥಾಪಿಸಲ್ಪಟ್ಟ SPV ಸಂಸ್ಥೆಯಾಗಿರುತ್ತದೆ. M/s Clean Max Enviro Energy Solutions Private Limited ಕಂಪನಿಯು ನಿಗದಿತ ನೆಟ್‌ವರ್ತ್ ಹೊಂದಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ, M/s CMES Jupiter Private Limited ಕಂಪನಿಯವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 70 ಮೆ.ವ್ಯಾ ಸಾಮರ್ಥ್ಯವನ್ನು 127 ಮೆ.ವ್ಯಾ.ಗೆ ಹೆಚ್ಚಿಸುವ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಸ್ವಂತ ಬಳಕೆ ಮತ್ತು ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡಲು ಅನುಮತಿಸಿ, ಸದರಿ ಕಂಪನಿಯವರಿಗೆ ಟೋಪೊಶೀಟ್ ಸಂಖ್ಯೆ:57 B/6 ರಲ್ಲಿ ನೀಡಿರುವ ಅಕ್ಷಾಂಶ ಮತ್ತು ರೇಖಾಂಶಗಳ ಸ್ಥಳದಲ್ಲಿ 47 ಸಂಖ್ಯೆಯ ವಿಂಡ್ ಟರ್ಬೈನ್ ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ, ಒಟ್ಟು 188 ಎಕರೆ (47 WTGs x 4 Acres=188 acres) ಜಮೀನನ್ನು ಉಪಯೋಗಿಸಬಹುದಾಗಿರುತ್ತದೆ ಎಂಬ ಅಭಿಪ್ರಾಯದೊಂದಿಗೆ ಸದರಿ ಯೋಜನೆಯ ಚೆಕ್‌ಲಿಸ್ಟನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ :ಎನರ್ಜಿ 240 ಎನ್‌ಸಿಇ 2021,

## ಬೆಂಗಳೂರು, ದಿನಾಂಕ:21.12.2021

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ M/s CMES Jupiter Private Limited ಕಂಪನಿಯವರಿಗೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ

....2

ಹಂಚಿಕೆಯಾಗಿರುವ 70 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 127 ಮೆ.ವ್ಯಾ. ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತುಗಳಿಗೊಳಪಟ್ಟು ಹೆಚ್ಚಿಸಿ ಆದೇಶಿಸಿದೆ.

**Geographical area description for 127 MW capacity wind power project of M/s CMES Jupiter Private Limited**

| Sl. No | Geographical area description of the project | Near by Villages of the proposed area & District | Existing capacity in MW | Capacity enhancement in MW | Total capacity in MW |
|---|---|---|---|---|---|
| 1 | The proposed area is surrounded by the Points-A-B-C-D-E-F-G-H-I-J-K-L-M-N-A and are held in the following Geographical co-ordinates as.<br>Point A: Lat:14°31'16.32" N, Long:76°20'25.44" E<br>Point B: Lat: 14°31'48.36" N, Long:76°20'0.96" E<br>Point C: Lat: 14°32'55.68" N, Long:76°20'51.36" E<br>Point D: Lat: 14°34'14.52" N, Long:76°21'5.4" E<br>Point E: Lat: 14°34'8.04" N, Long:76°22'54.58" E<br>Point F: Lat: Lat:14°33'31.03" N, Long:76°22'49" E<br>Point G: Lat: 14°32'34.47" N, Long:76°22'48.50" E<br>Point H: Lat:14°31'30.72" N, Long:76°23'34.98" E<br>Point I: Lat:14°31'30.61" N, Long:76°24'55.8" E<br>Point J: Lat:14°32'44.88" N, Long:76°25'8.04" E<br>Point K: Lat:14°32'0" N, Long:76°24'49.90" E<br>Point L: Lat: 14°30'0" N, Long:76°25'44.36" E<br>Point M: Lat:14°30'0" N, Long:76°22'59.41" E<br>Point N: Lat:14°31'18.84" N, Long:76°21'56.52" E<br>Peaks: 715, 666, 678, 662, 642 & 649 m AMSL<br>**Toposheet No**: 57 B/6 | Tamadihalli, Kasavanahalli, Korasarahalli, Gollarahatti, Hanumanthapura, Goguddu, Timmalapur, Siddammanahalli, Bangarakkana gudda, Mudalamachikere Kamagetanahalli, Bharmasamudra, Uddugatta and Jagalur villages of Jagalur Taluk, Davanagere District. | 70 MW | 57 MW | 127MW (47 Nos x 2700kW) |

**ಷರತ್ತುಗಳು:**

1) M/s CMES Jupiter Private Limited ಕಂಪನಿಯು ಸರ್ಕಾರಿ ಆದೇಶ ಸಂಖ್ಯೆ:ಇಎನ್ 435 ಎನ್.ಸಿ.ಇ 2011, ದಿನಾಂಕ:06.01.2012ರನ್ವಯ 45 ದಿನಗಳ ಒಳಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಪೂರಕ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2) M/s CMES Jupiter Private Limited ಕಂಪನಿಯು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ವೀಲಿಂಗ್ ಮತ್ತು ಬ್ಯಾಂಕಿಂಗ್ ಮೂಲಕ ಸ್ವಂತ ಬಳಕೆ ಮತ್ತು ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ಕುರಿತು ಕೆಪಿಟಿಸಿಎಲ್/ಸಂಬಂಧಿಸಿದ ಎಸ್ಕಾಂಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.

....3

3) M/s CMES Jupiter Private Limited ಕಂಪನಿಯು ಯೋಜನೆಯ ಸಾಮರ್ಥ್ಯವನ್ನು ಹೆಚ್ಚಿಸುವ ಸಂಬಂಧಿಸಿದಂತೆ ನಿಯಮಾನುಸಾರ ನಿಗದಿಪಡಿಸಿರುವ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್. ಗೆ ಪಾವತಿಸತಕ್ಕದ್ದು.

4) M/s CMES Jupiter Private Limited ಕಂಪನಿಯವರಿಗೆ ಮಂಜೂರಾಗಿರುವ 127 ಮೆ.ವ್ಯಾ. ಸಾಮರ್ಥ್ಯವನ್ನು 47 ಸಂಖ್ಯೆಯ ವಿಂಡ್ ಟರ್ಬೈನ್ ಗಳನ್ನು ಅಳವಡಿಸಲು ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ ಒಟ್ಟು 188 ಎಕರೆ (47 WTGs x 4 Acres = 188 acres) ಜಮೀನನ್ನು ಉಪಯೋಗಿಸತಕ್ಕದ್ದು.

5) ಅಭಿವೃದ್ಧಿದಾರರು ತಮ್ಮ ಕಂಪನಿಗೆ ಮಂಜೂರಾಗಿರುವ ಯೋಜನೆಯನ್ನು MNRE ರವರ ಮಾರ್ಗಸೂಚಿಯಂತೆ, (Micro Siting Guidelines) ಅಳವಡಿಸಿಕೊಂಡು, ಪವನ ವಿದ್ಯುತ್ ಘಟಕಗಳ ಅಂತರವನ್ನು ನಿಗದಿಗೊಳಿಸಿ ಅನುಷ್ಠಾನಗೊಳಿಸತಕ್ಕದ್ದು.

ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 288 ಎನ್‌ಸಿಇ 2019, ದಿನಾಂಕ:30.12.2019 ರಲ್ಲಿನ ಷರತ್ತುಗಳು ಯಥಾವತ್ತಾಗಿ ಅನ್ವಯಿಸುತ್ತದೆ.

ಈ ಆದೇಶವನ್ನು ರದ್ದು ಮಾಡುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

N. mangalagauri 21/12/21
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.
21/12/21

**ಇವರಿಗೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ / ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
5. ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ.
6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ದಾವಣಗೆರೆ ಜಿಲ್ಲೆ, ದಾವಣಗೆರೆ.
8. M/s CMES Jupiter Private Limited, 13 A, Floor-13, Plot-400, The Peregrine Apartment, Kismat Cinema, Prabhadevi, Mumbai-400025.
9. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು.
11. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.